## ಬಿ.ಎಂ.ಶ್ರೀ. ಪ್ರತಿಷ್ಠಾನ (ನೋಂ.)

ಬಿ.ಎಂ.ಶ್ರೀ. ಕಲಾಭವನ, ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, 3ನೇ ಮುಖ್ಯರಸ್ತೆ

ನರಸಿಂಹರಾಜ ಕಾಲೋನಿ, ಬೆಂಗಳೂರು-560004

### 45ನೇ ಸರ್ವ ಸದಸ್ಯರ ಸಭೆಯ ತಿಳಿವಳಿಕೆ ಪತ್ರ

ಮಾನ್ಯರೇ,

ಬಿ.ಎಂ.ಶ್ರೀ. ಪ್ರತಿಷ್ಠಾನದ ನಲವತ್ತನಾಲ್ಕನೇ ಸರ್ವಸದಸ್ಯರ ಸಭೆಯನ್ನು ದಿನಾಂಕ 27 -07-2025 ರಂದು ಭಾನುವಾರ ಬೆಳಗ್ಗೆ 10-30ಕ್ಕೆ ಪ್ರತಿಷ್ಠಾನದ ಎಂ.ವಿ.ಸೀ. ಸಭಾಂಗಣದಲ್ಲಿ ಡಾ. ಬೈರಮಂಗಲ ರಾಮೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಗುತ್ತದೆ. ತಾವು ದಯವಿಟ್ಟು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ಕಾರ್ಯಸೂಚಿ**

1. ಸ್ವಾಗತ ಮತ್ತು ಅಗಲಿದ ಸದಸ್ಯರಿಗೆ ಹಾಗೂ ಗಣ್ಯರಿಗೆ ಸಂತಾಪ ಸೂಚನೆ.
2. ಸರ್ವಸದಸ್ಯರ ಸಭೆಯ ತಿಳಿವಳಿಕೆ ಪತ್ರವನ್ನು ಓದಿ ಸ್ಥಿರೀಕರಿಸುವುದು.
3. 2024-25ನೇ ಸಾಲಿನ ಆಡಳಿತ ವರದಿಯ ಮಂಡನೆ ಮತ್ತು ಪರಿಶೀಲನೆ ಹಾಗೂ ಅಂಗೀಕರಿಸುವುದು.
4. 2024-25ನೇ ಸಾಲಿನ ಲೆಕ್ಕಪರಿಶೋಧಕರು ದೃಢೀಕರಿಸಿದ ಲೆಕ್ಕ ಪತ್ರಗಳು ಮತ್ತು ವರದಿಗಳ ಮಂಡನೆ ಮತ್ತು ದೃಢೀಕರೀಸುವುದು.
5. 2025-26ನೇ ಸಾಲಿನ ಆಯ-ವ್ಯಯ ಅಂದಾಜು ಪಟ್ಟಿ ಮಂಡನೆ, ಪರಿಶೀಲನೆ ಹಾಗೂ ಅಂಗೀಕಾರ.
6. 2025-26ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವುದು.
7. ಸದಸ್ಯರು ನಿಯಮಾನುಸಾರ ಕಳುಹಿಸಿರುವ ಸೂಚನೆಗಳನ್ನು ಮಂಡಿಸುವುದು.
8. ಇತರ ವಿಚಾರಗಳು (ಅಧ್ಯಕ್ಷರ ಅನುಮತಿ ಮೇರೆಗೆ)
9. ಅಧ್ಯಕ್ಷರ ಸಮಾರೋಪ ಭಾಷಣ
10. ನಿಯಮಾನುಸಾರ ನಿವೃತ್ತರಾಗುತ್ತಿರುವ ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಕ್ಕೆ ಚುನಾವಣೆ.
11. ವಂದನಾರ್ಪಣೆ.

**ಚುನಾವಣೆ ವೇಳಾಪಟ್ಟಿ**

| | |
|---|---|
| *** ನಾಮಪತ್ರಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ** | **04-07-2025 ಶುಕ್ರವಾರ** |
| *** ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ** | **09-07-2025 ಬುಧವಾರ** |
| *** ಉಮೇದುದಾರರ ಪತ್ರಗಳ ಪರಿಶೀಲನೆ ದಿನಾಂಕ** | **12-07-2025 ಶನಿವಾರ** |
| *** ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ದಿನಾಂಕ** | **14-07-2025 ಸೋಮವಾರ** |
| *** ಉಮೇದುವಾರಿಕೆ ಹಿಂಪಡೆಯುವ ದಿನಾಂಕ** | **16-07-2025 ಬುಧವಾರ** |
| *** ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಅಂತಿಮಪಟ್ಟಿ ಪ್ರಕಟಿಸುವ ದಿನಾಂಕ** | **21-07-2025 ಸೋಮವಾರ** |
| *** ಚುನಾವಣೆ ದಿನಾಂಕ** | **27-07-2025 ಭಾನುವಾರ** |

***2022-2025 ನೇ ಸಾಲಿಗೆ ಆಯ್ಕೆಯಾಗಿ ಈಗ ನಿವೃತ್ತರಾಗಲಿರುವ ಕಾರ್ಯಕಾರಿ ಸಮಿತಿ ಸದಸ್ಯರುಗಳ ಹೆಸರು**

1. ಪ್ರೊ. ಜಿ. ಅಶ್ವತ್ಥನಾರಾಯಣ
2. ಪ್ರೊ. ಜಿ. ಅಬ್ದುಲ್ ಬಷೀರ್
3. ಶ್ರೀ ಬಿ.ಆರ್. ರವೀಂದ್ರನಾಥ್
4. ಡಾ.ಎಸ್. ಅನಿಲ್‌ಕುಮಾರ್
5. ಶ್ರೀ ಸಂಗಮೇಶ್ ಬಾದವಾಡಗಿ

**ವಿಶೇಷ ಸೂಚನೆ**

1. ಸದಸ್ಯರು ಬರುವಾಗ ತಮ್ಮ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು. ಗುರುತಿನ ಚೀಟಿಯನ್ನು ಪಡೆದಿಲ್ಲದವರು ದಿನಾಂಕ 25-07-2025ರ ಒಳಗೆ ಗುರುತಿನ ಚೀಟಿಯನ್ನು ಕಛೇರಿಯಿಂದ ಪಡೆಯಬಹುದು..
2. ಸದಸ್ಯರು ಕಳುಹಿಸುವ ಸಲಹೆ ಸೂಚನೆಗಳನ್ನು 21-07-2025 ಸಂಜೆ : 5.30 ಗಂಟೆಗೆ ಮುಂಚೆ ಕಛೇರಿಗೆ ತಲುಪಿಸಬೇಕು.
3. ಆಡಳಿತ ವರದಿ ಮತ್ತು ಲೆಕ್ಕ ಪತ್ರಗಳ ಪ್ರತಿಯನ್ನು ಪ್ರತಿಷ್ಠಾನದ ಕಛೇರಿ ಸಮಯದಲ್ಲಿ ಪಡೆಯಬಹುದು.
4. ಕಚೇರಿಗೆ ವಾರದ ರಜಾದಿನ ಭಾನುವಾರ ಆಗಿರುತ್ತದೆ.
5. ಮತದಾನ ಮಾಡಲು ಚುನಾವಣೆ ದಿನಾಂಕ 25.07.2025ಕ್ಕೆ ಕನಿಷ್ಠ ಒಂದು ವರ್ಷ ಪೂರೈಸಿರಬೇಕು.
6. ಸದಸ್ಯರು ಕಾರ್ಯಕಾರಿ ಸಮಿತಿಗೆ ಸ್ಪರ್ಧಿಸಲು ಕನಿಷ್ಠ 5 ವರ್ಷವಾಗಿರಬೇಕು.
7. 26.07.2024ಕ್ಕೆ ಮುಂಚೆ ಸದಸ್ಯತ್ವ ಪಡೆದವರು ಮಾತ್ರ ಮತದಾನದ ಹಕ್ಕು ಹೊಂದಿರುತ್ತಾರೆ ಹಾಗೂ 26.07.2020ರ ಮುಂಚೆ ಸದಸ್ಯರಾಗಿರುವವರು ಮಾತ್ರ ಚುನಾವಣೆಗೆ ಸ್ಪರ್ಧಿಸಬಹುದು.
8. ಮತದಾನ ಮಾಡುವ ಸದಸ್ಯರು ಚುನಾವಣಾ ಸ್ಪರ್ದಿಗಳಲ್ಲಿ 5 ಮಂದಿಗೆ ಕಡ್ಡಾಯವಾಗಿ ಮತ ಹಾಕಬೇಕು. 5ಕ್ಕಿಂತ ಕಡಿಮೆ ಅಥವಾ ಹೆಚ್ಚು ಮತ ಚಲಾಯಿಸಿದರೆ ಆ ಮತಪತ್ರ ಅಸಿಂಧುವಾಗುತ್ತದೆ.

**ದಿನಾಂಕ: 30-06-2025**

**ಸೋಮವಾರ**

**ಡಾ. ಶಾಂತರಾಜು**

ಗೌರವ ಕಾರ್ಯದರ್ಶಿ

**ಕಾರ್ಯಕಾರಿ ಸಮಿತಿಯ ಅಪ್ಪಣೆಯ ಮೇರೆಗೆ**